## - 3 -

## ಸಭಾಪಂಗಡವಲ್ಲದ ಕ್ರೈಸ್ತತ್ವ -

# ಅದರ ಅಗತ್ಯತೆ ಇದೆಯೋ?

ಪರಿಶುದ್ಧಾತ್ಮನಿಂದ ನಮಗೆ ಕೊಡಲ್ಪಟ್ಟ ದಾಖಲೆಗಳ ಪ್ರಕಾರ, ಪಂಚಾಶತ್ತಮ ದಿನದಂದು ಕ್ರಿಸ್ತನ ಕಡೆಗೆ ತರಲ್ಪಟ್ಟ ಶಿಷ್ಯರಲ್ಲಿ ಯಾರೊಬ್ಬನೂ "ಸಭೆಯನ್ನು ಸೇರಿ ಕೊಳ್ಳುವದರ" ಬಗ್ಗೆ ವಿಚಾರಿಸಲ್ಪಡಲಿಲ್ಲ. ಆ ದಿನಗಳಲ್ಲಿ "ಸಭೆಯ ಸಂಬಂಧದ ಬಗ್ಗೆ ಯಾವ ಆಯ್ಕೆಯೂ" ಕೊಡಲ್ಪಡಲಿಲ್ಲ. "ಹೊಸದಾಗಿ ಮಾರ್ಪಟ್ಟವರಿಗೆ," "ನಿನ್ನ ಆಯ್ಕೆಯ ಸಭೆಯನ್ನು ಸೇರಿಕೋ" ಎಂದು ಯಾವ ಪ್ರಸಂಗಿಯೂ ಎಂದೂ ಹೇಳಲಿಲ್ಲ. ಆಗ ಒಂದೇ ಒಂದು ಸಭೆಯಿತ್ತು ಮತ್ತು ರಕ್ಷಿಸಲ್ಪಟ್ಟವರೆಲ್ಲರೂ ಅದಕ್ಕೆ ಒಳಪಟ್ಟಿದ್ದರು - ಅದಕ್ಕೆ ಅವರು "ಸೇರಿಕೊಂಡದ್ದರಿಂದ" ಅಲ್ಲ, ಬೇರೆ ಸಭೆಗಿಂತ ಅವರು ಅದನ್ನು ಹೆಚ್ಚು ಮೆಚ್ಚಿಕೊಂಡದ್ದರಿಂದ ಅಲ್ಲ, ಆದರೆ ಅವರು ನಮ್ಮ ಕರ್ತನ ಅಮೂಲ್ಯ ರಕ್ತದಿಂದ ಕೊಂಡುಕೊಳ್ಳಲ್ಪಟ್ಟದ್ದರಿಂದ. ರಕ್ತದಿಂದ ಅವರು ವಿಮೋಚಿಸಲ್ಪಟ್ಟ ದಿನ, ತಾಸು ಮತ್ತು ನಿಮಿಷದಲ್ಲಿಯೇ ಕೊಂಡುಕೊಳ್ಳುವಿಕೆಯ ಹಕ್ಕಿನಿಂದ ಅವರು ದೇವರವರಾಗಿದ್ದಾರೆ. ಆತನವರಾಗಿರುವದರಿಂದ, ಅವರು ಆತನ ಜನರೊಂದಿಗೆ, ಕರ್ತನಿಂದ ಸೃಷ್ಟಿಸಲ್ಪಟ್ಟ ದೇಹದೊಂದಿಗೆ ಕೂಡಿಸಲ್ಪಟ್ಟಿದ್ದಾರೆ; ಯಾಕಂದರೆ ರಕ್ಷಿಸಲ್ಪಟ್ಟವರನ್ನು ಪ್ರತೀದಿನ ಆತನು ಕೂಡಿಸುತ್ತಿದ್ದನು. ಈ ಜನರು ಭೂಮಿಯ ಮೇಲೆ ರಕ್ಷಿಸಲ್ಪಟ್ಟವರನ್ನು, ಯೆರೂಸಲೇಮಿನಲ್ಲಿ ಇದ್ದ ಸಭೆಯನ್ನು ರಚಿಸಿದರು.

ಈಗ, ಪ್ರಥಮ ಕ್ರೈಸ್ತರು, ಧಾರ್ಮಿಕವಾಗಿ ಮಾತಾಡುವವದಾದರೆ, ಕ್ರೈಸ್ತರಾಗಿದ್ದರು. ಅವರು ಯಾವುದೇ ಕ್ರೈಸ್ತ ಪಂಗಡಕ್ಕೆ ಸೇರಿರಲಿಲ್ಲ, ಆದರೆ ಸಭಾಪಂಗಡವಲ್ಲದ ಕ್ರೈಸ್ತರಾಗಿದ್ದರು ಮತ್ತು ದೇವರ ಸಭೆಗೆ, ರಕ್ಷಿಸಲ್ಪಟ್ಟವರೊಂದಿಗೆ ಮಾತ್ರವೇ ಒಳಪಟ್ಟಿದ್ದರು. ದೇವರು ತನ್ನ ಸಭೆಗೆ ಅವರನ್ನು ಕೂಡಿಸಿದ್ದರಿಂದ, ಅವರು ಈ ಜನರಿಗೆ ಒಳಪಟ್ಟಿದ್ದರು. ಈ ರೀತಿಯಲ್ಲಿ ಮತ್ತು ಕೇವಲ ಈ ರೀತಿಯಲ್ಲಿ ಅವರು ಜೀವಿಸಿದ್ದರೆ ಮತ್ತು ಸತ್ತು ಹೋಗಿದ್ದರೆ, ಈ ಪ್ರಥಮ ಕ್ರೈಸ್ತರು ಮಾಡಿದಂತೆ ಜೀವಿಸುವಂತೆ ಮತ್ತು ಸಾಯುವಂತೆ ಆಗುವ ಹಕ್ಕನ್ನು ಯಾರು ನನಗೆ ಅಲ್ಲಗಳೆಯುವರು? ಅವರಿದ್ದಂತೆ ಕ್ರೈಸ್ತನಾಗಿರುವ ನನ್ನ ಹಕ್ಕನ್ನು ಮತ್ತು ಹಾಗಿರುವುದು ನನ್ನ ಆದ್ಯ ಕರ್ತವ್ಯವೆಂಬುದನ್ನು ಯಾರು ಅಲ್ಲಗಳೆಯುವರು?

ನಾನು ಪರಿಶುದ್ಧಾತ್ಮನ ನಂಬಿಗಸ್ತ ಹಿಂಬಾಲಕನೂ ಮತ್ತು ಈ ಕ್ರೈಸ್ತರಿಗಿಂತ - ಹೆಚ್ಚಿನವನೂ ಆಗಿರಬಹುದೋ? ಭೂಮಿಯ ಮೇಲಿನ ಪ್ರಥಮ ಕ್ರೈಸ್ತರು ಸಭಾಪಂಗಡತ್ವದಿಂದ ಸ್ವತಂತ್ರರಾಗಿದ್ದರು; ಅಂದರೆ, ಅವರು ಯಾವುದೇ ಪಂಗಡಕ್ಕೆ ಸೇರಿದವರಾಗಿದ್ದಿಲ್ಲ. ಅವರು ಹಾಗೆ ಪರಿಶುದ್ಧಾತ್ಮನಿಂದ ನಿರ್ದೇಶಿಸಲ್ಪಟ್ಟಿದ್ದರೆ, ಸಭಾಪಂಗಡದ ಕ್ರೈಸ್ತನಾಗಿರಲು ಒಬ್ಬನು ಪರಿಶುದ್ಧಾತ್ಮನ ನಾಯಕತ್ವದಿಂದ ಅಗಲಿ ಹೋಗಲಿಕ್ಕಾಗದೋ? ಒಬ್ಬ ಕ್ರೈಸ್ತನಾಗಿರುವುದು ಮತ್ತು ಕೇವಲ ಕ್ರೈಸ್ತನಾಗಿರುವುದು ನನ್ನ ಬಿಟ್ಟುಕೊಡದ ಹಕ್ಕು ಮತ್ತು ಮಾಡಲೇ ಬೇಕಾದ ಕರ್ತವ್ಯವಾಗಿದೆ; ಬೇರೆ ಯಾವುದೇ ಮಾರ್ಗದಲ್ಲಿ ಪರಿಶುದ್ಧಾತ್ಮನನ್ನು ನಂಬಿಕೆಯಿಂದ ಅನುಸರಿಸಲಾರೆನು.

ಆದುದರಿಂದ, ಸಭಾಪಂಗಡದ ಹೆಸರು ಒತ್ತಾಯ ಪೂರ್ವಕವಾಗಿ ನನ್ನ ಮೇಲೆ ಹೊರಿಸದೇ ಮತ್ತು ಇತರರನ್ನು ಕ್ರೈಸ್ತರಲ್ಲದವರನ್ನಾಗಿ ಮಾಡಲು ಪ್ರಯತ್ನಿಸುವ ದೂರನ್ನು ಹೊರಿಸದೇ, ಪರಿಶುದ್ಧಾತ್ಮನ ನಿರ್ದೇಶನವನ್ನು ಅನುಸರಿಸಲು ನಂಬಿಗಸ್ತ ಪ್ರಯತ್ನ ಮಾಡಲು ಬಿಡಲ್ಪಡಬಹುದೋ?

ಪ್ರತಿಯೊಂದು ಆತ್ಮವು ರಕ್ಷಿಸಲ್ಪಡಲಿಕ್ಕಾಗುವಂತೆ ಸಾಧ್ಯವಾದವನನ್ನು ಕ್ರಿಸ್ತನ ರಕ್ತದ ಬಳಿಗೆ ನಡಿಸುವುದು ಪರಲೋಕದಿಂದ ನನ್ನ ಮೇಲೆ ಇಡಲ್ಪಟ್ಟ ನನ್ನ ಕರ್ತವ್ಯವಾಗಿದೆ. ದೇವರ ಆತ್ಮನ ಪರಿಶುದ್ಧವಾದ ಮತ್ತು ಸುರಕ್ಷಿತವಾದ ನಾಯಕತ್ವ ದೊಳಗೆ ಪ್ರತಿಯೊಂದು ಆತ್ಮವನ್ನು ತರುವುದು ನನ್ನ ಹಂಗು ಆಗಿರುತ್ತದೆ. ದೈವಿಕ ಆತ್ಮನಿಂದ ಮಾಡಲ್ಪಟ್ಟ ಕ್ರೈಸ್ತರು ಸಭಾಪಂಗಡವಲ್ಲದ ಕ್ರೈಸ್ತರಾಗಿದ್ದುದರಿಂದ, ಹೊಸ ಒಡಂಬಡಿಕೆಯ ಸಮಯಗಳಲ್ಲಿ ಇರುವಂತೆ ಜನರನ್ನು ಪರಿಶುದ್ಧಾತ್ಮನು ನಡಿಸಿದಂತೆ ಅಂಥ ಕ್ರೈಸ್ತನಾಗಿರಲು ಹೋರಾಡುತ್ತ ದೇವರನ್ನು ಮೆಚ್ಚಿಸಲು ಬಯಸುವ ಪ್ರತಿಯೊಬ್ಬನಿಗೆ ಸಹಾಯ ಮಾಡುವುದು ಮತ್ತು ಪ್ರೋತ್ಸಾಹಿಸುವುದು ನನ್ನ ಕರ್ತವ್ಯವಾ ಗುವದಿಲ್ಲವೇ? ಈ ಕಾರಣದಿಂದ, ಕ್ರೈಸ್ತರಾಗಿರಲು ಬಯಸುವ ಎಲ್ಲರಿಗೆ - ಮೊದಲಿನ ದಿನಗಳಲ್ಲಿ ಪರಿಶುದ್ಧಾತ್ಮನಿಂದ ನಡಿಸಲ್ಪಟ್ಟಂಥ ಕ್ರೈಸ್ತರಂತೆ ಇರಲು ಬಯಸುವವರಿಗೆ - ಸಭಾಪಂಗಡತ್ವದಿಂದ ತಮ್ಮನ್ನು ಬಿಡಿಸಿಕೊಂಡು, ಅದರೊಂದಿಗೆ ಯಾವ ಅನ್ಯೋನ್ಯತೆ ಹೊಂದಿರಬಾರದೆಂದು ಪ್ರಬೋಧಿಸುತ್ತೇನೆ. ನಿಶ್ಚಯವಾಗಿಯೂ, ಪರಿಶುದ್ಧಾತ್ಮನನ್ನು ಅನುಸರಿಸುತ್ತಿರುವಾಗ, ಯಾವ ಕ್ರೈಸ್ತನೂ ಸಭಾಪಂಗಡದೊಂದಿಗೆ ಸೇರಿಕೊಂಡು ಅದರ ಅನ್ಯೋನ್ಯತೆಯಲ್ಲಿ ಇರುವದಿಲ್ಲ, ಯಾಕಂದರೆ, ದೈವಿಕ ಆತ್ಮನು ಕ್ರೈಸ್ತರನ್ನು ಎಂದೂ ಸಭಾಪಂಗಡದೊಳಗೆ ನಡಿಸಲಿಲ್ಲ. ಆ ಸತ್ಯವು ಸೂರ್ಯನು ಪ್ರಾತಃಕಾಲದಲ್ಲಿ ಉದಯವಾಗುವಷ್ಟು ನಿಶ್ಚಿತವಾದದ್ದಾಗಿರುತ್ತದೆ.

ಈ ಯುಗದ ಸಭಾಪಂಗಡದ ಸ್ಥಾಪಕನು ಪರಿಶುದ್ಧಾತ್ಮನಾಗಿದ್ದಾನೋ ಎಂಬುದು ಒಂದು ಪ್ರಶ್ನೆಯಾಗಿರುವದಿಲ್ಲ; ಯಾಕಂದರೆ ಆತನು ಆಗಿರುವದಿಲ್ಲ ಎಂಬುದು ನಿಶ್ಚಿತವಾದದ್ದಾಗಿದೆ. ಆದರೆ ಪ್ರಶ್ನೆಯು, "ಆತನ ಪರಿಶುದ್ಧ ನಿರ್ದೇಶನದಿಂದ ಮಾಡಲ್ಪಟ್ಟವರಂತೆ ಒಬ್ಬ ಕ್ರೈಸ್ತನಾಗಿರಲು ನಾನು ತೃಪ್ತನಾಗಿರುವೆನೋ?" ಎಂಬುದು "ನಾನು ಆತನ ಸ್ಪಷ್ಟವಾದ ಸರಳತೆಯಲ್ಲಿ ತೃಪ್ತನಾಗಿದ್ದೇನೋ, ಇಲ್ಲವೇ ಆತನ ದೈವಿಕ ಮಾದರಿಯನ್ನು ಕಡೆಗಣಿಸುವದಕ್ಕೆ ಜವಾಬ್ದಾರಿಕೆಯನ್ನು ತೆಗೆದುಕೊಳ್ಳಲು ಇಷ್ಟವು ಳ್ಳವನಾಗಿದ್ದೇನೋ?" ಎಂದು ನನ್ನಷ್ಟಕ್ಕೆ ನಾನೇ ಕೇಳಿಕೊಳ್ಳಬೇಕಾದ ಪ್ರಶ್ನೆಯಾಗಿದೆ. ದೇವರು ಜನರನ್ನು ತನ್ನ ಸೇವಕರಾಗಿರಲು ಒತ್ತಾಯಮಾಡುವದಿಲ್ಲ. ಆದರೆ ಆಯ್ದು ಕೊಳ್ಳಲು ಸ್ವತಂತ್ರವಾಗಿ ಬಿಡುತ್ತಾನೆ. ಕೆಲವು ವೈಯಕ್ತಿಕ ವ್ಯಕ್ತಿಗಳು ಧರ್ಮದಲ್ಲಿ ನಮ್ಮ ದೇವರ ಜ್ಞಾನಕ್ಕಿಂತ ಹೆಚ್ಚಾಗಿ ಮಾನವರ ಜ್ಞಾನವನ್ನು ಅನುಸರಿಸುವದನ್ನು ಬಯಸುತ್ತಾರೆ (ಈ ಜ್ಞಾನದ ಅಂತ್ಯವು ಈ ಯುಗದ ಸಭಾಪಂಗಡತ್ವವಾಗಿದೆ). ದೇವರು ಇದನ್ನು ಬಿಡುತ್ತಾನೆ, ಆದರೆ ಆತನು ಎಚ್ಚರಿಸುತ್ತಾನೆ,

> ಆದರೆ ಈ ಎಲ್ಲಾ ವಿಷಯಗಳಲ್ಲಿಯೂ ದೇವರು ನಿನ್ನನ್ನು ನ್ಯಾಯವಿಚಾರಣೆಗೆ ಗುರಿಮಾಡುವನೆಂದು ತಿಳಿದಿರು (ಪ್ರಸಂಗಿ 11:9ಸಿ).

> ಇಸ್ರಾಯೇಲ್ಯರೇ, ಕೇಳಿರಿ; ನೀವು ಬದುಕಿಕೊಂಡು ನಿಮ್ಮ ಪಿತೃಗಳ ದೇವರಾದ ಯೆಹೋವನು ನಿಮಗೆ ಕೊಡುವ ದೇಶವನ್ನು ಸೇರಿ ಸ್ವಾಧೀನ ಮಾಡಿಕೊಳ್ಳುವಂತೆ ನಾನು ಈಗ ಬೋಧಿಸುವ ಆಜ್ಞಾವಿಧಿಗಳನ್ನು ಗಮನಿಸಿ

ಅನುಸರಿಸಬೇಕು. ನಿಮ್ಮ ದೇವರಾದ ಯೆಹೋವನು ಕೊಟ್ಟ ಆಜ್ಞೆಗಳನ್ನೇ ನಾನು ನಿಮಗೆ ತಿಳಿಸುತ್ತಾ ಇದ್ದೇನೆ. ಈ ಮಾತುಗಳನ್ನು ನೀವು ಕೈಕೊಳ್ಳಬೇಕೇ ಹೊರತು ಅವುಗಳಿಗೆ ಏನೂ ಕೂಡಿಸಬಾರದು, ಅವುಗಳಿಂದ ಏನೂ ತೆಗೆದುಬಿಡಬಾರದು (ಧರ್ಮೋಪದೇಶಕಾಂಡ 4:1, 2).

ನಾನು ನಿಮಗೆ ಆಜ್ಞಾಪಿಸುವದನ್ನೆಲ್ಲಾ ನೀವು ಅನುಸರಿಸಲೇ ಬೇಕು; ಅದಕ್ಕೆ ಏನೂ ಕೂಡಿಸಬಾರದು; ಅದರಿಂದ ಏನೂ ತೆಗೆದುಬಿಡಬಾರದು (ಧರ್ಮೋಪದೇಶಕಾಂಡ 12:32).

ನನ್ನನ್ನು ಕರ್ತನೇ, ಕರ್ತನೇ, ಎಂದು ಅನ್ನುವವರೆಲ್ಲರು ಪರಲೋಕರಾಜ್ಯದಲ್ಲಿ ಸೇರುವರೆಂದು ನೆನಸಬೇಡಿರಿ; ಪರಲೋಕದಲ್ಲಿರುವ ನನ್ನ ತಂದೆಯ ಚಿತ್ತದಂತೆ ನಡೆಯುವವನೇ ಪರಲೋಕರಾಜ್ಯಕ್ಕೆ ಸೇರುವನು (ಮತ್ತಾಯ 7:21).

ಕ್ರಿಸ್ತನ ಉಪದೇಶದಲ್ಲಿ ನೆಲೆಗೊಳ್ಳದೆ ಅದನ್ನು ಅತಿಕ್ರಮಿಸಿ ಮುಂದಕ್ಕೆ ಹೋಗುವವನಿಗೆ ದೇವರ ಅನ್ಯೋನ್ಯತೆಯಿಲ್ಲ. ಆ ಉಪದೇಶದಲ್ಲಿ ನೆಲೆಗೊಂಡಿರುವವನಿಗೆ ತಂದೆಯ ಮತ್ತು ಮಗನ ಅನ್ಯೋನ್ಯತೆ ಉಂಟು (2 ಯೋಹಾನ 9).

ಈ ಪುಸ್ತಕದ ಪ್ರವಾದನಾ ವಾಕ್ಯಗಳನ್ನು ಕೇಳುವ ಪ್ರತಿಯೊಬ್ಬನಿಗೆ ನಾನು ಹೇಳುವ ಸಾಕ್ಷಿ ಏನಂದರೆ - ಇವುಗಳಿಗೆ ಯಾವನಾದರೂ ಹೆಚ್ಚು ಮಾತುಗಳನ್ನು ತಂದುಹಾಕಿದರೆ ದೇವರು ಅವನ ಮೇಲೆ ಈ ಪುಸ್ತಕದಲ್ಲಿ ಬರೆದಿರುವ ಉಪದ್ರವಗಳನ್ನು ತಂದು ಹಾಕುವನು. ಯಾವನಾದರೂ ಈ ಪ್ರವಾದನಾ ಪುಸ್ತಕದಲ್ಲಿರುವ ಮಾತುಗಳಲ್ಲಿ ಒಂದನ್ನಾದರೂ ತೆಗೆದುಬಿಟ್ಟರೆ ಈ ಪುಸ್ತಕದಲ್ಲಿ ಬರೆದಿರುವ ಪರಿಶುದ್ಧ ಪಟ್ಟಣದಲ್ಲಿಯೂ ಜೀವವೃಕ್ಷದಲ್ಲಿಯೂ ಅವನಿಗಿರುವ ಪಾಲನ್ನು ದೇವರು ತೆಗೆದು ಬಿಡುವನು (ಪ್ರಕಟನೆ 22:18, 19).

ಪರಿಶುದ್ಧಾತ್ಮನು ತನ್ನ ಬೋಧನೆಯಲ್ಲೆಲ್ಲಾ ಬಲವಾದ ಮಾತುಗಳಲ್ಲಿ ಎಲ್ಲಾ ಸೇರಿಸುವಿಕೆಗಳನ್ನೂ ತನ್ನ ಬೋಧನೆಗೆ ಬದಲಾವಣೆಗಳನ್ನೂ, ತಿದ್ದುಪಡಿಗಳನ್ನೂ ಕಳೆಯುವಿಕೆಗಳನ್ನು ಮಾಡುವದನ್ನು ಪ್ರತಿಬಂಧಿಸುತ್ತಾನೆ. ನಾವು ಸಾಯಲೇ ಬೇಕು ಎಂಬುದನ್ನು ತಿಳಿದಿರುವಂತೆ ಇದನ್ನು ನಿಶ್ಚಯವಾಗಿ ತಿಳಿದಿದ್ದೇವೆ. ಸಭಾ ಪಂಗಡತ್ವವು ಅದರ ಎಲ್ಲಾ ಗಲಿಬಿಲಿಗಳೊಂದಿಗೆ ಮತ್ತು ವಿರೋಧಗಳೊಂದಿಗೆ ಕ್ರಿಸ್ತನ ಸರಳತೆಗೆ ಮಾನವ ಜ್ಞಾನದಿಂದ ಮಾಡಲ್ಪಟ್ಟದ್ದರ ಕೂಡಿಸುವಿಕೆಯಾಗಿದೆ. ಆ ಸತ್ಯವು ಯೇಸುವು ಸಮಾಧಿಯಿಂದ ಎದ್ದು ಬಂದದ್ದರಷ್ಟು ನಿಶ್ಚಿತವಾದದ್ದಾಗಿದೆ. ಪರಿಶುದ್ಧಾತ್ಮನು ತನ್ನ ಕಾರ್ಯಕ್ಕೆ ಹೆಚ್ಚಿನದನ್ನು ಕೂಡಿಸುವದನ್ನು ಬಲವಾಗಿ ತಡೆಗಟ್ಟುತ್ತಾನೆ ಹಾಗೂ ಕ್ರಿಸ್ತನ ಮುಖಾಂತರವಾಗಿ ಸಭಾಪಂಗಡವಲ್ಲದ ಕ್ರೈಸ್ತತ್ವವನ್ನು ಕೊಟ್ಟಿದ್ದಾನೆ. ಪ್ರತಿಷ್ಠಿತ ಹೃದಯಗಳು - ಧರ್ಮದಲ್ಲಿ ದೇವರ ಆತ್ಮನನ್ನು ಮಾತ್ರವೇ ಅನುಸರಿಸಲು ತೀರ್ಮಾನಿಸಿದ ಹೃದಯಗಳು - ಹೇಗೆ ಸಭಾಪಂಗಡದ ಕ್ರೈಸ್ತತ್ವದಲ್ಲಿ ಮುಂದರಿಯುವವು ಎಂಬುದು ವಿವರಿಸಲಸಾಧ್ಯವಾಗಿದೆ. ಅದರ ಬಗ್ಗೆ ನೀನೇನು ಮಾಡುವಿ? ಅದು ನಿನ್ನ ಜವಾಬ್ದಾರಿಕೆಯಾಗಿದೆ.

## ಐಕ್ಯತೆ ಮತ್ತು ಅನ್ಯೋನ್ಯತೆ

"... ಪರಿಶುದ್ಧಾತ್ಮನಾದ ತಂದೆಯೇ, ನಾವು ಒಂದಾಗಿರುವ ಹಾಗೆ ಇವರೂ ಒಂದಾಗಿರಬೇಕೆಂದು ನೀನು ನನಗೆ ಕೊಟ್ಟ ನಿನ್ನ ಹೆಸರಿನಲ್ಲಿ ಇವರನ್ನು ಕಾಯಬೇಕು" (ಯೋಹಾನ 17:11).

"... ಸಮಾಧಾನವೆಂಬ ಬಂಧನದಿಂದ ಕಟ್ಟಲ್ಪಟ್ಟವರಾಗಿದ್ದು ಪರಿಶುದ್ಧಾತ್ಮನಿಂದುಂಟಾಗುವ ಐಕ್ಯವನ್ನು ಕಾಪಾಡಿಕೊಳ್ಳುವದಕ್ಕೆ ಆಸಕ್ತರಾಗಿರಿ. ನೀವೆಲ್ಲರೂ ಒಂದೇ ದೇಹಕ್ಕೆ ಸೇರಿದವರು, ಒಬ್ಬನೇ ಆತ್ಮನನ್ನು ಹೊಂದಿದವರು, ಒಂದೇ ಪದವಿಯನ್ನು ನಿರೀಕ್ಷಿಸುವದಕ್ಕೆ ಕರೆಯಲ್ಪಟ್ಟವರು; ನಿಮ್ಮೆಲ್ಲರಿಗೂ ಕರ್ತನು ಒಬ್ಬನೇ, ಭರವಸವು ಒಂದೇ, ಬಾಪ್ತಿಸ್ಮ ಒಂದೇ. ಎಲ್ಲರಿಗೂ ತಂದೆಯಾಗಿರುವ ದೇವರು ಒಬ್ಬನೇ; ಆತನು ಎಲ್ಲರ ಮೇಲಿರುವವನೂ ಎಲ್ಲರ ಮುಖಾಂತರ ಕಾರ್ಯ ನಡಿಸುವವನೂ ಎಲ್ಲರಲ್ಲಿ ವಾಸಿಸುವವನೂ ಆಗಿದ್ದಾನೆ" (ಎಫೆಸ 4:3-6).

"ಕ್ರಿಸ್ತನಿಂದ ಉತ್ತೇಜನ, ಪ್ರೀತಿಯ ಪ್ರೇರಣೆ, ಪರಿಶುದ್ಧಾತ್ಮನ ಅನ್ಯೋನ್ಯತೆ, ಕಾರುಣ್ಯದಯಾರಸಗಳು ಉಂಟಾಗುವವಾದರೆ, ಐಕಮತ್ಯವುಳ್ಳವರಾಗಿದ್ದು ನನ್ನ ಸಂತೋಷವನ್ನು ಪರಿಪೂರ್ಣಮಾಡಿರಿ. ನಿಮ್ಮೆಲ್ಲರಲ್ಲಿ ಒಂದೇ ಪ್ರೀತಿಯಿರಲಿ; ಅನ್ಯೋನ್ಯ ಭಾವವುಳ್ಳವರೂ ಒಂದೇ ಗುರಿಯಿಟ್ಟುಕೊಂಡವರೂ ಆಗಿರ್ರಿ" (ಫಿಲಿಪ್ಪಿ 2:1, 2).

© 2009 Truth for Today